**ದಿನಾಂಕಃ07.07.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು.**

**ಪಾಟೀಸವಾಲುಃ ಶ್ರೀ.ಎಮ್.ಪಿ.ಬಸವರಾಜು ವಕೀಲರಿಂದ ಎದುರುದಾರರ ಪರವಾಗಿ.**

ನ್ಯಾಯಾಲಯದಿಂದ ನೋಟೀಸ್ ಬಂದ ಕಾರಣ ನಾನು ಸಾಕ್ಷಿ ಹೇಳಲು ಬಂದಿದ್ದೇನೆ. ನ್ಯಾಯಾಲಯದ ಅಮೀನ್‌ರವರು ನನಗೆ ನೋಟೀಸ್ ನೀಡಿದ್ದಾರೆ. ಅರ್ಜಿದಾರರು ಸದರಿ ನೋಟೀಸನ್ನು ನೀಡಿದ್ದು, ಅಮೀನ್‌ರವರ ಜೊತೆ ಅವರು ಇದ್ದರು. ನೋಟೀಸ್ ತೆಗೆದುಕೊಳ್ಳುವ ಪೂರ್ವದಲ್ಲಿ ಅರ್ಜಿದಾರರು ನನ್ನನ್ನು ಸಂಪರ್ಕಿಸಿರುವುದಿಲ್ಲ. ನೋಟೀಸ್ ಬಂದ ನಂತರ ಸಾಕ್ಷಿ ಹೇಳಲು ನನಗೆ ತಿಳಿಸಿದ್ದಾರೆ. ಯಾವುದೇ ನೋಟೀಸನ್ನು ನಮ್ಮ ಕಾಂಪೌಂಡ್ ತಂದಿರುವುದಿಲ್ಲ ಎಂದು ತಿಳಿಸಲು ನನಗೆ ಸಾಕ್ಷಿಗೆ ಕರೆದಿದ್ದಾರೆ.

2. ನಾನು ಅರ್ಜಿದಾರರ ಕಾಂಪೌಂಡ್‌ನಿಂದ 1 ಕಿ.ಮೀ ದೂರದಲ್ಲಿ ವಾಸವಾಗಿದ್ದೇನೆ. ನಾನು ಸುಮಾರು 50 ವರ್ಷದಿಂದ ಅಂದರೆ ಹುಟ್ಟಿ ಬೆಳೆದಿರುವುದು ಸದರಿ ಚಿಂತಾಮಣಿಯಲ್ಲೆ. ನಾವು ಅರ್ಜಿದಾರರ ಕಾಂಪೌಂಡಿನಲ್ಲೆ ಕೆಲಸ ಮಾಡುತ್ತಿದ್ದು ಯಾವುದೇ ನೋಟೀಸ್ ಬಂದರು ನಮಗೆ ತಿಳಿಯುತ್ತದೆ. ಬೆಳಗ್ಗೆ 6.30 ರ ಸಮಯದಲ್ಲಿ ನಮಾಜ್ ಮಾಡಿಕೊಂಡು ಸದರಿ ಅರ್ಜಿದಾರರ ಕಾಂಪೌಂಡ್‌ಗೆ ಹೋದರೆ ಸುಮಾರು 9.30 ಅಥವ 11.00 ಗಂಟೆ ರಾತ್ರಿವರೆಗೂ ಅಲ್ಲೆ ಇರುತ್ತೇನೆ.? ನಾನು ಬಿಲ್ಡಿಂಗ್‌ನಲ್ಲಿ ಇದ್ದಾಗ ಎಲೆಕ್ಟ್ರಿಷಿಯನ್ ಕೆಲಸ ಮಾಡುತ್ತೇನೆ. ನಾನು ವಾಸ ಮಾಡುವ ಸ್ಥಳದ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ನಾನು ಕೆಲಸ ಮಾಡುತ್ತೇನೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಅದರ ಯಾವುದೇ ದಾಖಲೆ ಕೊಡಲು ಬರುವುದಿಲ್ಲ. ನಾನು ಆಧಾರ್ ಕಾರ್ಡ್ ಹಾಜರುಪಡಿಸಬಹುದು.

3. 2018 ರ ಅಕ್ಟೋಬರ್ ತಿಂಗಳಲ್ಲಿ ನಾನು ಸದರಿ ಚಿಂತಾಮಣಿಯಲ್ಲೆ ಅರ್ಜಿದಾರರ ಕಾಂಪೌಂಡ್‌ನಲ್ಲಿ ವಾಸವಾಗಿದ್ದೆ. ಸದರಿ ಕಾಂಪೌಂಡ್‌ನಲ್ಲಿ ಅರ್ಜಿದಾರರ ಮನೆ, 4-5 ಗೋಡೌನ್‌ಗಳು, ಲಾರಿ ಟ್ರಾನ್ಸ್-ಪೋರ್ಟ್ ಕಚೇರಿ ಇದ್ದು, ನನಗೂ ಒಂದು

ಗೋಡೌನ್‌ನನ್ನು ನೀಡಿದ್ದಾರೆ. ಅದರಲ್ಲಿ ವಿದ್ಯುಚ್ಛಕ್ತಿ ರಿಪೇರಿಗೆ ಬೇಕಾಗಿರುವ ವಸ್ತುಗಳನ್ನು ಮಾತ್ರ ಇಟ್ಟುಕೊಂಡಿದ್ದೇನೆ. ನನಗೆ ನೀಡಿರುವ ಗೋಡೌನ್ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಸದರಿ ಕಾಂಪೌಂಡಿನ ವಿಳಾಸ ವೆಂಕಟರೆಡ್ಡಿ ಆಸ್ಪತ್ರೆ ರಸ್ತೆ, ಎನ್.ಆರ್ extension, ಸಲೀಮ್ ಟ್ರಾನ್ಸ್-ಪೋರ್ಟ್ ಎಂದಿರುತ್ತದೆ. ಈ ವಿಳಾಸ ಹಾಕಿದರೆ ಯಾವುದೇ ಪತ್ರಗಳು ಸದರಿ ಅರ್ಜಿದಾರರ ಕಾಂಪೌಂಡ್‌ಗೆ ಬರುತ್ತದೆ. ಅರ್ಜಿದಾರರು ಯಾವಾಗಲೂ ಸದರಿ ಕಾಂಪೌಂಡ್‌ನಲ್ಲೆ ಇರುತ್ತಾರೆ. ಸದರಿ ವಿಳಾಸಕ್ಕೆ ಪೋಸ್ಟ್ ಮ್ಯಾನ್‌ಗಳು ಯಾವ ಸಮಯದಲ್ಲಿ ಬರುತ್ತಾರೆ ಎಂದು ನಮಗೆ ಹೇಳಲು ಆಗುವುದಿಲ್ಲ. ಅವರಿಗೆ ನಿರ್ದಿಷ್ಟ ಸಮಯ ಇರಲಿಲ್ಲ. ಪೋಸ್ಟ್ ಮ್ಯಾನ್ ಸದರಿ ಕಾಂಪೌಂಡ್‌ಗೆ ಆಗಾಗ ಬರುತ್ತಿರುತ್ತಾರೆ. ಪೋಸ್ಟ್ ಮ್ಯಾನ್ ಮೊದಲು ನನಗೆ ಕೇಳುವುದು. ನಾವು ಅರ್ಜಿದಾರರ ಮನೆಯಲ್ಲಿ ಹೆಣ್ಣು ಮಕ್ಕಳು ಇರುವ ಕಾರಣ ಬೆಲ್ ಮಾಡಿ ಅವರನ್ನು ಕರೆಯುತ್ತೇವೆ. ಯಾರ ಪೋಸ್ಟ್ ಎಂದು ನಾವು ವಿಚಾರಿಸುವುದಿಲ್ಲ. ಯಾವುದೇ ಪೋಸ್ಟ್ ಬಂದರು ನಾವು ಯಾರದ್ದು ಎಂದು ವಿಚಾರಿಸಿ ನಾನೇ ಖುದ್ದು ಅರ್ಜಿದಾರರ ಮನೆಯಲ್ಲಿ ತಿಳಿಸುತ್ತೇನೆ.

4. ಅರ್ಜಿದಾರರ ವಕೀಲರು ನಾವು ಸಲ್ಲಿಸಿರುವ ಪ್ರಮಾಣ ಪತ್ರವನ್ನು ತಯಾರಿಸಿದ್ದಾರೆ. ಸದರಿ ಪ್ರಮಾಣ ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ನ್ಯಾಯಾಲಯದ ನೋಟೀಸ್‌ಗಳನ್ನು ತಲುಪದೆ ಇರುವಂತೆ ಅರ್ಜಿದಾರರಾದ ನಿಗಾರ್ ಸುಲ್ತಾನ್‌ರವರು ದಾರಿ ತಪ್ಪಿಸುತ್ತಿದ್ದರು ಎಂದು ಹೇಳಿದ್ದು, ಯಾವ ರೀತಿ ಎಂದು ಪ್ರಶ್ನಿಸಿದರೆ ನನಗೆ ಹೇಳಲು ಆಗುವುದಿಲ್ಲ. ಯಾವುದೇ ಪೋಸ್ಟ್ ಬಂದರೆ ಪೋಸ್ಟ್ ಮ್ಯಾನ್ ಬಂದಿದ್ದಾರೆ ಎಂದು ಮಾತ್ರ ನಾನು ಹೇಳುತ್ತಿದ್ದು, ಅರ್ಜಿದಾರರು ಇದ್ದಾರೋ ಇಲ್ಲವೋ ಎಂದು ನಾನು ನೋಡುತ್ತಿರಲಿಲ್ಲ. ಪೋಸ್ಟ್ ಮ್ಯಾನ್ ಬಂದಂತಹ ಸಂದರ್ಭದಲ್ಲಿ ಅರ್ಜಿದಾರರು ಇರುತ್ತಿದ್ದರೋ ಇಲ್ಲವೋ ಎಂದು ನನಗೆ ಮಾಹಿತಿ ಇಲ್ಲ. ನಾನು ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದರೆ ಅರ್ಜಿದಾರರಿಗೆ ಏನು ಉಪಯೋಗ ಆಗುತ್ತದೆ ಎಂದು ನನಗೆ ಅವರು ತಿಳಿಸಿರುವುದಿಲ್ಲ.

5. ಅರ್ಜಿದಾರರು ಈ ನ್ಯಾಯಾಲಯದಿಂದ ಬಂದಂತಹ ನೋಟೀಸನ್ನು ಉದ್ದೇಶ ಪೂರ್ವಕವಾಗಿ ತಿರಸ್ಕರಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರರು ನನಗೆ ಸ್ಥಳ ನೀಡಿರುವ ಕಾರಣದಿಂದ ನಾನು ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿ, ಓದಿ ಹೇಳಿ ನಂತರ ಸಹಿ ಪಡೆಯಲಾಯಿತು).

ಓ ಹೇ ಕೇ ಸ ಇದೆ.

5 ನೇ ಅಪರ ನ್ಯಾಯಾಧೀಶರು,
ಲಘು ವ್ಯವಹಾರಗಳ ನ್ಯಾಯಾಲಯ,
24 ನೇ ಎಸಿಎಂಎಂ ಮತ್ತು ಸದಸ್ಯರು ಎಂಎಸಿಟಿ.